‘ಕೋವಿಡ್ ಲಾಕ್‌ಡೌನ್ ವೇಳೆ ಪತಿ ಉದ್ಯೋಗ ಕಳೆದುಕೊಂಡರು. ಧುತ್ತನೆ ಎದುರಾದ ಆರ್ಥಿಕ ಸಂಕಷ್ಟ ಕುಟುಂಬವನ್ನು ಕಂಗೆಡಿಸಿತು. ಎರಡನೇ ಮಗು ಆಗಿನ್ನೂ ಹಸುಳೆ. ಅನಿವಾರ್ಯತೆಯೇ ಅನ್ವೇಷಣೆಯ ಮಾರ್ಗ ತೋರಿತು. ಮನೆಯಲ್ಲೇ ಕುಳಿತು ಹೇಗೆ ಆದಾಯ ಗಳಿಸಬಹುದೆಂದು ತಡಕಾಡುತ್ತಿದ್ದಾಗ ಮೊಬೈಲ್‌ನಲ್ಲಿ ಹೊಸ ರುಚಿಯ ವಿಡಿಯೊಗಳು ಇಣುಕುತ್ತಿದ್ದವು. ಲಾಕ್‌ಡೌನ್‌ನಿಂದಾಗಿ ಮನೆಯಲ್ಲಿ ಬಂದಿಯಾಗಿದ್ದ ಜನರಿಗೆ ಆಗ ಅಡುಗೆ ಮಾಡುವ ಹುಚ್ಚು ಹೆಚ್ಚಾಗಿತ್ತು. ನಾನೂ ಇದಕ್ಕೆ ಹೊರತಾಗಿರಲಿಲ್ಲ. ಹೊಸರುಚಿ ಪ್ರಯೋಗಗಳನ್ನೇ ಹೆಚ್ಚು ಶಿಸ್ತುಬದ್ಧವಾಗಿ ಮಾಡಿ ವಿಡಿಯೊದಲ್ಲಿ ಸೆರೆ ಹಿಡಿದು ಅಪ್‌ಲೋಡ್ ಮಾಡಲು ಶುರುಮಾಡಿದೆ. ಹೀಗೆ ನನ್ನ ಯೂಟ್ಯೂಬ್ ಪಯಣ ಶುರುವಾದದ್ದು’ ಎನ್ನುತ್ತ ಜ್ಯೋತ್ನಾ, ಅಡುಗೆ ರೆಸಿಪಿಗಳ ಪುಟ ತೆರೆದಿಡುತ್ತ ಹೋದರು.

‘‘ಮೊದಲು ಶುರು ಮಾಡಿದ ‘ಕುಕ್ ವಿತ್ ಜೋ’ ಯೂಟ್ಯೂಬ್ ಚಾನೆಲ್ ನಿರೀಕ್ಷಿತ ಆದಾಯ ತರಲಿಲ್ಲ. ಆದರೆ, ನನ್ನೊಳಗಣ ಛಲ ಹಿಂದಕ್ಕೆ ಸರಿಯಲು ಬಿಡಲಿಲ್ಲ. ‘ಮಂಗಳೂರು ರೆಸಿಪಿಸ್’ ಹೆಸರಿನೊಂದಿಗೆ ಹೊಸ ತಾಣ ಹುಟ್ಟುಹಾಕಿದಾಗ ನೋಡುಗರಿಂದ ದೊರೆತ ಸ್ಪಂದನೆ, ನನ್ನ ಅಡುಗೆ ಪ್ರಯೋಗಾಲಯ ಬೆಳೆಸಲು ಪ್ರೇರಣೆಯಾಯಿತು, ಗಳಿಕೆಗೊಂದು ಗಟ್ಟಿ ಮೂಲವೂ ಸಿಕ್ಕಿದಂತಾಯಿತು’’ ಎನ್ನುವ ಅವರು, ಅಡುಗೆಗೆ ಇಂದಿಗೂ ಅಮ್ಮನೇ ನನಗೆ ಗುರು ಎಂದು ಹೆಮ್ಮೆಯಿಂದ ಹೇಳಿಕೊಂಡರು.

‘ಡಲ್ಗೊನಾ ಕಾಫಿ’ ತಯಾರಿಸುವ ವಿಧಾನವನ್ನು ಕನ್ನಡದಲ್ಲಿ ವಿವರಿಸಿದ್ದ ಜ್ಯೋತ್ನಾ ಅವರ ವಿಡಿಯೊ ಲಕ್ಷಾಂತರ ಮನೆಗಳಲ್ಲಿ ಡಲ್ಗೊನಾದ ಘಮ ಹರಡಿತ್ತು.

ತುಳುನಾಡಿನ ಸಾಂಪ್ರದಾಯಿಕ ಅಡುಗೆಗಳೇ ‘ಮಂಗಳೂರು ರೆಸಿಪೀಸ್’ ವಿಶೇಷತೆ. ಅಡುಗೆಯೇ ಅವರ ವಿಡಿಯೊಗಳ ಸರಕು. ಫಿಶ್ ಫ್ರೈ, ಫಿಶ್ ಕರಿ, ಚಿಕನ್ ಬಿರಿಯಾನಿ, ಚಿಕನ್ ಸುಕ್ಕ, ಗ್ರೀನ್ ಚಿಲ್ಲಿ ಚಿಕನ್, ಅಂಜಲ್ ಮಸಾಲಾ ಫ್ರೈ, ಒಣಮೀನು ಅಲಸಂಡೆ ಸಾರು, ನುಂಗೆಲ್ ಎಟ್ಟಿ ಚಟ್ನಿ (ಕರಾವಳಿಯ ವಿಶೇಷ ಡ್ರೈ ಪ್ರಾನ್ಸ್ ಚಟ್ನಿ), ಪ್ರಾನ್ಸ್ ಆಲೂ ಮಸಾಲಾ, ಮಟನ್ ಪುಲಾವ್, ಘೀ ರೋಸ್ಟ್, ಏಡಿ ಸುಕ್ಕ ಹೀ ಗೆ ನಾನ್ ವೆಜ್ ಪ್ರಿಯರ ಬಾಯಲ್ಲಿ ನೀರೂರಿಸುವ ವಿಡಿಯೊಗಳು ಒಂದೆರಡಲ್ಲ. ನಾನ್ ವೆಜ್ ಜೊತೆಗೆ ತರಕಾರಿ ಅಡುಗೆಯಲ್ಲೂ ಅವರು ಎತ್ತಿದ ಕೈ. ಕಡಲೆಕಾಳು– ತೊಂಡೆಕಾಯಿ ಸೇರಿಸಿದ ಸುಕ್ಕ (ಪಲ್ಯ), ಗುಜ್ಜೆ (ಎಳೆ ಹಲಸು) ಕಬಾಬ್, ಮೆಣಸಿನಕಾಯಿ ವಡಾ, ಈರುಳ್ಳಿ ಬಜೆ, ಅವಲಕ್ಕಿ ಮಸಾಲಾ, ವಿವಿಧ ಬಗೆಯ ಪಾಯಸ, ದಾಲ್ ಫ್ರೈಯಂತಹ ಸುಲಭವಾಗಿ ತಯಾರಿಸುವ ಅಡುಗೆಗಳ ವಿಡಿಯೊಗಳೂ ನೋಡುಗರ ಮೆಚ್ಚುಗೆ ಪಡೆದಿವೆ.



ಹೊರದೇಶಗಳಲ್ಲಿರುವವರು, ಅವಿವಾಹಿತರು, ಉದ್ಯೋಗಿಗಳಿಗೆ ಸುಲಭದಲ್ಲಿ ತಯಾರಿಸುವ ನೆಲಮೂಲದ ಬೇಸಿಕ್ ರೆಸಿಪೀಗಳೇ ಇಷ್ಟ. ನಾಲ್ಕೈದು ವರ್ಷಗಳಲ್ಲಿ ಸಿದ್ಧಪಡಿಸಿದ 788 ಲಾಂಗ್ ವಿಡಿಯೊಗಳು, 126 ಸಣ್ಣ ವಿಡಿಯೊಗಳು ಯೂಟ್ಯೂಬ್‌ನಲ್ಲಿವೆ. ವಿವಿಧ ಬಗೆಯ ಫಿಶ್ ರೆಸಿಪಿ ವಿಡಿಯೊಗಳು ಮಿಲಿಯನ್ ವ್ಯೂಸ್ ದಾಟಿವೆ. ‘ಮಂಗಳೂರು ರೆಸಿಪೀಸ್’ ಫೇಸ್‌ಬುಕ್ ಪುಟ ತಡವಿದರೆ ಸಾವಿರಕ್ಕೂ ಹೆಚ್ಚು ರೆಸಿಪಿಗಳು ತೆರೆದುಕೊಳ್ಳುತ್ತವೆ. ವಿಡಿಯೊ ನೋಡಿ ಅಡುಗೆ ತಯಾರಿಸಿದವರು ‘ನಿಮ್ಮ ವಿಡಿಯೊ ನೋಡಿ ಮಾಡಿದ ಅಡುಗೆ ಸಖತ್ತಾಗಿತ್ತು ಮೇಡಂ’ ಎಂದು ಖುಷಿಯಿಂದ ಕರೆ ಮಾಡಿದಾಗ ಏನೋ ಒಂಥರಾ ಸಮಾಧಾನ ಎನ್ನುವ ಜ್ಯೋತ್ನಾ, ತಮ್ಮ ವಿಡಿಯೊ ಅನುಸರಿಸಿದ ಮುಂಬೈಯ ಮಹಿಳೆಯೊಬ್ಬರು ಪುಟ್ಟ ಕೇಟರಿಂಗ್ ಉದ್ಯಮವನ್ನೇ ಪ್ರಾರಂಭಿಸಿದ್ದನ್ನು ನೆನಪಿಸಿಕೊಂಡರು.

ಕೆಫೆ, ಚಾಟ್ ಸೆಂಟರ್, ಹೋಟೆಲ್, ಪ್ರವಾಸಿ ತಾಣಗಳ ದರ್ಶನ ಮಾಡಿಸುವ ‘ಜ್ಯೋತ್ನಾ ವ್ಲಾಗ್’ ಕೂಡ ನೋಡುಗರಿಗೆ ಅಚ್ಚುಮೆಚ್ಚು. ಯೂಟ್ಯೂಬ್ ವಿಡಿಯೊಗಳಿಂದ ಗಳಿಸಿರುವ ಜನಮನ್ನಣೆ ಉದ್ಯಮದತ್ತ ಅವರನ್ನು ಕೊಂಡೊಯ್ದಿದೆ. ಎಗ್ ಮಸಾಲಾ, ಬಿರಿಯಾನಿ ಮಸಾಲಾ, ಆಲ್ ಇನ್ ಒನ್ ಪೆಪ್ಪರ್ ಮಸಾಲಾ ಹೀಗೆ ಎಂಟಕ್ಕೂ ಹೆಚ್ಚು ಮಸಾಲೆ ಉತ್ಪನ್ನಗಳನ್ನು ತಯಾರಿಸುವ ಜ್ಯೋತ್ನಾ ಅವರು, ಮೊದಲ ರುಚಿ ತೋರಿಸುವುದು ಅಮ್ಮನಿಗಂತೆ.

ಅಮ್ಮ ಈಗ ತಂಗಿಯ ಜೊತೆ ದುಬೈನಲ್ಲಿ ನೆಲೆಸಿದ್ದಾರೆ. ಆಲ್ ಇನ್ ಒನ್ ಪೆಪ್ಪರ್ ಮಸಾಲಾ ಬಿಡುಗಡೆಗೆ ಮೊದಲು ಅಮ್ಮನಿಗೆ ಕಳುಹಿಸಿ ಕೊಟ್ಟಿದ್ದೆ. ಪರಿಮಳ ಸ್ವಲ್ಪ ಕಡಿಮೆಯಾಯ್ತು ಎಂದ ಅಮ್ಮ, ಜೊತೆಗೆ ಟಿಪ್ಸ್ ಅನ್ನೂ ಹೇಳಿದ್ದರು. ಅಮ್ಮನ ರೆಸಿಪಿ ಗುಟ್ಟಿನ ಕಾರಣಕ್ಕೇ ಇರಬೇಕು ಈ ಪೌಡರ್ ಗ್ರಾಹಕರ ಮನಗೆದ್ದಿದೆ. ಬೆಂಗಳೂರು, ಮುಂಬೈನಲ್ಲೂ ನಮ್ಮ ಮಸಾಲಾ ಪೌಡರ್‌ಗೆ ಗ್ರಾಹಕರಿದ್ದಾರೆ. ವಿದೇಶಗಳಲ್ಲಿರುವವರು ಮೊದಲೇ ಆರ್ಡರ್ ಕೊಟ್ಟು ಊರಿಗೆ ಬಂದಾಗ ಎಂ.ಸಿ. ಮಸಾಲಾ ಕೊಂಡೊಯ್ಯುತ್ತಾರೆ ಎನ್ನುವ ಅವರು, ಯೂಟ್ಯೂಬ್‌ನಿಂದ ಉದ್ಯಮದವರೆಗಿನ ಪಯಣದಲ್ಲಿ ಬೆನ್ನೆಲುಬಾಗಿ ನಿಂತ ಪತಿ, ಕುಟುಂಬದ ಸದಸ್ಯರು ಕೈಜೋಡಿಸಿದ್ದರಿಂದಲೇ ಸಾಧನೆ ಸಾಧ್ಯವಾಯಿತು ಎನ್ನಲು ಮರೆಯಲಿಲ್ಲ.

ಲಿಂಕ್: (youtube.com/watch?v=Cv7aPigZfXs)







